**ಓ.ಎಸ್. ನಂ. 45/2021** **ಡಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 25.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಆರ್ ವಕೀಲರಿಂದಃ</u>

ವಾದಿಯು ಸರಗೂರಿನಲ್ಲಿ ಓಡಾಡುತ್ತಿದ್ದರಿಂದ ಅವರ ಪರಿಚಯವಿರುತ್ತದೆ. ವಾದಿಯು ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಪ್ರತಿವಾದಿಯು ಕೋವಿಡ್ ಸಮಯದಲ್ಲಿ ಸರಗೂರಿಗೆ ಬಂದಿದ್ದು, ಆಗ ಅವರ ಪರಿಚಯವಾಗಿರುತ್ತದೆ. ವಾದಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ನಾನು ದಾವಮನೆಯನ್ನು ನೋಡಿರುತ್ತೇನೆ. ಈಗ ನೋಡುತ್ತಿರುವ ನಿಪಿ9 ಭಾವಚಿತ್ರದಲ್ಲಿರುವ ಮನೆಯು ದಾವಮನೆಯಾಗಿರುತ್ತದೆ. ಸರಗೂರು ಪಟ್ಟಣದಲ್ಲಿ ಈಗ ಖಾಲಿ ನಿವೇಶನ ಹಾಗೂ ಪ್ರತಿ ಚದರಡಿ ಮನೆಗೆ ಎಷ್ಟು ಮೌಲ್ಯ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ಒಟ್ಟು ಮೌಲ್ಯ ಈಗ 40-45 ಲಕ್ಷ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಯಾವ ಷೆಡ್ಯೂಲ್‌ಆಸ್ತಿಗೆ ಸಂಬಂಧಿಸಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಮನೆಯ ಮೊದಲನೆ ಮಹಡಿಯಲ್ಲಿ ವಾದಿಯ ಮಗ ಕೃಷ್ಣರವರು ವಾಸ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ಮಾರಾಟದ ಮಾತುಕತೆಯಲ್ಲಿ ನಾನು ಭಾವವಹಿಸಿರುವುದಿಲ್ಲ. ದಾವಆಸ್ತಿಯ ಕ್ರಯದ ಬಗ್ಗೆ ಪ್ರತಿವಾದಿಯು ವಾದಿಗೆ ಯಾವ ದಿನಾಂಕದಂದು ಹಣ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಾದಿಯನ್ನು ದಾವಆಸ್ತಿಯ ಕ್ರಯದ ಬಗ್ಗೆ ನೋಂದಣಿ ಕಛೇರಿಯಲ್ಲಿ ನೋಡಿರುತ್ತೇನೆ. ನೋಂದಣಿ ಕಛೇರಿಗೆ ಬರುವ ಪೂರ್ವದಲ್ಲಿ ದಾವಆಸ್ತಿಗೆ ಸಂಬಂಧಿಸಿದಂತೆ ಏನೆಲ್ಲಾ ವ್ಯವಹಾರವಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮೂರು ಮಹಡಿಗಳು ಸೇರಿ ದಾವಮನೆಯ ಸರ್ಕಾರಿ ಮೌಲ್ಯ ಕ್ರಯದ ಸಮಯದಲ್ಲಿ ರೂ. 21,65,272/- ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ನಿಡಿ1 ಕ್ರಯಪತ್ರವನ್ನು ನೋಡಿರುತ್ತೇನೆ. ನಿಡಿ1 ರ ಷೆಡ್ಯೂಲ್‌ನಲ್ಲಿ ನೆಲ ಮಹಡಿ, 1 ನೇ ಮಹಡಿ ಮತ್ತು 2 ನೇ ಮಹಡಿಯ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ವಾದಿಯು ನೆಲಮಹಡಿಗೆ ಮಾತ್ರ 23 ಲಕ್ಷ ರೂಪಾಯಿಗೆ ಮಾತುಕತೆ ಮಾಡಿದ್ದರು ಎಂದರೆ ಸಾಕ್ಷಿದಾರರು ಸಂಪೂರ್ಣ ಕಟ್ಟಡಕ್ಕೆ ಮಾತುಕತೆಯಾಗಿತ್ತು ಎನ್ನುವರು. 23 ಲಕ್ಷ ಹಣವನ್ನು ಪ್ರತಿವಾದಿಯು ವಾದಿಗೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಪ್ರತಿವಾದಿಯ ಜೊತೆ ಅನ್ಯೋನ್ಯವಾಗಿರುತ್ತೇನೆ ಎಂದರೆ ಸರಿ. ಆ ರೀತಿ ಅನ್ಯೋನ್ಯವಾಗಿರುವ ಕಾರಣ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ಯಾವುದೇ ಕ್ರಯದ ವ್ಯವಹಾರದ ಬಗ್ಗೆ ಗೊತ್ತಿರುವುದಿಲ್ಲ, ನೆಲಮಹಡಿಯನ್ನು ಮಾತ್ರ ಮಾರಾಟ ಮಾಡಲು ವಾದಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ವಾದಿಗೆ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ, ಅದನ್ನು ದುರುಪಯೋಗಪಡಿಸಿಕೊಂಡು ಕ್ರಯಪತ್ರದಲ್ಲಿ ಸಂಪೂರ್ಣ ಮನೆ ಎಂದು ನಮೂದು ಮಾಡಲು ನಾನು ಸಹ

ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.